**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 266/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶಿವಕುಮಾರಸ್ವಾಮಿ | ಪ್ರಮಾಣ ಮಾಡಿದ ದಿನಾಂಕಃ 01.07.2026 |
| ತಂದೆ ಹೆಸರು | | ನಿತ್ಯಾನಂದಸ್ವಾಮಿ | |
| ವಯಸ್ಸು | | 34 ವರ್ಷ | |
| ವೃತ್ತಿ | | ಕಾನ್ ಸ್ಟೇಬಲ್ | ಚಾಸಾ: 06 |
| ವಾಸಸ್ಥಳ | | ಬೇಗೂರು | ಫ್ರಾಸಾ: 04 |

**ದಿನಾಂಕಃ** 01.07.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 28.05.2026 ರಂದು ಸಂಜೆ 7.00 ಸಮಯದಲ್ಲಿ ಚಾಸಾ-1 ರವರು ನಮ್ಮನ್ನು ಕರೆದು ಬಾತ್ಮಿದಾರರಿಂದ ಯಡೆಯಾಲ ರಸ್ತೆ ಮಾರ್ಗವಾಗಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಬಂದಿದೆ ಆ ಕಾರಣ ದಾಳಿ ಮಾಡಲು ಇಬ್ಬರು ಪಂಚರುಗಳನ್ನು ಕರೆತರಲು ಹೇಳಿದ ಮೇರೆಗೆ ನಾನು ಇಬ್ಬರು ಪಂಚರನ್ನು ಕರೆದುಕೊಂಡು ಬಂದೆ. ಆಗ ಸಮಯ ಸಂಜೆ 7.05 ಆಗಿತ್ತು. ನಮ್ಮ ಇಲಾಖಾ ವಾಹನದಲ್ಲಿ ಚಾಸಾ-1 ರಿಂದ 3, ಚಾಸಾ-7 ಮತ್ತು ನಾನು ಯಡಯಾಲ ರಸ್ತೆಯ ಉಪ್ಕೊ ಪ್ಯಾಕ್ಟರಿ ಹತ್ತಿರ ಹೋದೇವು. ಆ ಕಾಲಕ್ಕೆ ಯಡೆಯಾಲದಿಂದ ಬೇಗೂರು ಕಡೆಗೆ ಒಂದು ಗೂಡ್ಸ್ ವಾಹನ ಬರುತಿದ್ದು, ಅದನ್ನು ತಡೆದು ನಿಲ್ಲಿಸಿ, ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ ನಾಲ್ಕು ಜಾನುವಾರುಗಳು ಇದ್ದವು. ಸದರಿ ಜಾನುವಾರುಗಳನ್ನು ಒಂದಕ್ಕೊಂದು ಹಿಂಸೆಯಾಗುವ ರೀತಿ ಕಟ್ಟಿದ್ದರು. ಸದರಿ ವಾಹನದ ಚಾಲಕನ ಹೆಸರನ್ನು ಕೇಳಲಾಗಿ ಚಂದನ್ ಅಲಿಯಾಸ್ ಚಂದ್ರು ಎಂದು ಹೇಳಿದ.

ಸದರಿ ಜಾನುವಾರುಗಳನ್ನು ಸಾಗಿಸಲು ಪರವಾನಗೆ ಮತ್ತು ಸೂಕ್ತ ದಾಖಲೆಗಳನ್ನು ಕೇಳಲಾಗಿ ಆತ ಇಲ್ಲ ಎಂದು ಹೇಳಿದ. ಆರೋಪಿಯು ಸದರಿ ಜಾನುವಾರುಗಳನ್ನು ಅಕ್ರಮವಾಗಿ ತಮಿಳುನಾಡಿನ ಕಸಾಯಿ ಖಾನೆಗೆ ಸಾಗಿಸುತ್ತಿರುವುದಾಗಿ ಹೇಳಿದ. ಪಂಚರ ಸಮಕ್ಷಮ ಮಹಜರ್ ಮಾಡಿ ಆರೋಪಿ,

ವಾಹನ ಮತ್ತು ಜಾನುವಾರುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರ್ ನ್ನು ರಾತ್ರಿ 7.40 ರಿಂದ 8.30 ರವರೆಗೆ ಮಾಡಲಾಯಿತು. ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ನಿಪಿ1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ2 ಮತ್ತು 3 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಾಹನವನ್ನು ನೋಡಿದರೆ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**<u>ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ</u>**

ಆರೋಪಿಯ ಗೂಡ್ಸ್ ವಾಹನದ ಸಂಖ್ಯೆಃ ಕೆಎ-10-ಎ-1292 ಟಾಟ ಮೇಘ ಕಂಪನಿಯ ನೀಲಿ ಬಣ್ಣದ ಗೂಡ್ಸ್ ವಾಹನ ಎಂದರೆ ಸರಿ. ಸದರಿ ಜಾನುವಾರುಗಳನ್ನು ಪರಿಶೀಲಿಸಲಾಗಿ

1. ಒಂದು ಬಿಳಿ ಬಣ್ಣದ ದೊಡ್ಡ ನಾಡ ಹಸು,
2. ಒಂದು ಕಂದು ಬಣ್ಣದ ಮಿಶ್ರಿತ ನಾಡ ಹಸು,
3. ಒಂದು ಬಿಳಿ ಬಣ್ಣದ ಕರು,
4. ಕಂದು ಬಣ್ಣದ ಕರು ಇತ್ತು ಎಂದರೆ ಸರಿ. ಅವುಗಳ ಒಟ್ಟು ಮೌಲ್ಯ ರೂ.60,000/- ಎಂದು ಪಂಚರು ಅಂದಾಜು ಮಾಡಿದರು ಎಂದರೆ ಸರಿ. ಸದರಿ ಜಾನುವಾರುಗಳನ್ನು ಸಾಗಾಣೆ ಮಾಡಲು ವೈದ್ಯಕೀಯ ಪ್ರಮಾಣ ಪತ್ರ ಇದೇಯಾ ಎಂದು ಕೇಳಿದೇವು ಎಂದರೆ ಸರಿ. ನಿಪಿ1 ನ್ನು ನಾನೇ ಬೆರಳಚ್ಚು ಮಾಡಿರುತ್ತೇನೆ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ</u>**

ಘಟನಾ ಸ್ಥಳಕ್ಕೆ ಹೋದ 5 ನಿಮಿಷಗಳ ನಂತರ ಆರೋಪಿ ಅಲ್ಲಿಗೆ ಬಂದಿರುತ್ತಾರೆ. ನಮ್ಮ ಠಾಣೆಯಿಂದ ಘಟನಾ ಸ್ಥಳ 1 ಕೀ.ಮೀ. ಆಗಬಹುದು. ಆಗ ಸುಮಾರು 3 ರಿಂದ 4 ಜನ ಸಾರ್ವಜನಿಕರು ಓಡಾಡುತ್ತಿದ್ದರು. ನಿಖರವಾಗಿ ಯಾವ ವಾಹನದಲ್ಲಿ ಜಾನುವಾರುಗಳನ್ನು

ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಇರಲಿಲ್ಲ. ಆರೋಪಿ ವಾಹನವನ್ನು ತಡೆದು ನಿಲ್ಲಿಸುವ ಮುನ್ನಾ ಸುಮಾರು 2 ರಿಂದ 3 ವಾಹನಗಳನ್ನು ತಪಾಸಣೆಗೆ ಒಳಪಡಿಸಿದ್ದೇವು. ಫೋಟೋವನ್ನು ಸಾರ್ವಜನಿಕರಿಂದ ತೆಗೆಸಿರುತ್ತೇವೆ, ಸಾಕ್ಷಿ ಮುಂದುವರೆದು ಫೋಟೋವನ್ನು ಚಾಸಾ−1 ರವರ ಮೊಬೈಲ್ ನಿಂದ ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಸುಮಾರು 1 ರಿಂದ 1.15 ನಿಮಿಷಗಳ ಅವಧಿಯವರೆಗೆ ಇದ್ದೇವು. ಚಾಸಾ−1 ಮತ್ತು 2 ರವರಿಗೆ ಠಾಣೆಯಲ್ಲಿ ನೋಟೀಸ್ ನೀಡಿಲಾಯಿತು. ಸದರಿ ಗೂಡ್ಸ್ ವಾಹನದಲ್ಲಿ

1. ಒಂದು ಬಿಳಿ ಬಣ್ಣದ ದೊಡ್ಡ ನಾಡ ಹಸು,
2. ಒಂದು ಕಂದು ಬಣ್ಣದ ಮಿಶ್ರಿತ ನಾಡ ಹಸು,
3. ಒಂದು ಬಿಳಿ ಬಣ್ಣದ ಕರು,
4. ಕಂದು ಬಣ್ಣದ ಕರು ಇತ್ತು.

ಚಾಸಾ−1 ರವರಿಗೆ ಮಾಹಿತಿ ಬಂದ ಮೇರೆಗೆ ಆರೋಪಿ ಸದರಿ ವಾಹನದಲ್ಲಿ ಮೇಲ್ಕಂಡ ಜಾನುವಾರುಗಳನ್ನು ಸಾಗಿಸುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅಕ್ರಮವಾಗಿ ಸದರಿ ಜಾನುವಾರುಗಳನ್ನು ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೆ ಪಂಚಾನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೆ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ−1 ರವರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ